ಓ ಎಸ್ಃ 577/2014

**ಡಿ ಡಬ್ಲ್ಯೂ ಃ** 5

ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎ ಹೆಚ್ ವಕೀಲರಿಂದಃ**

1975 ರಲ್ಲಿ ಆದ ವಿಭಾಗ ಆದ ಬಗ್ಗೆ ನನಗೆ ನನ್ನ ತಂದೆಯವರಿಂದ ಗೊತ್ತಾಗಿರುತ್ತದೆ. ನಮ್ಮ ಮನೆಯಲ್ಲಿ ವಿಭಾಗ ಪತ್ರ ಕೂಡ ಇರುತ್ತದೆ. ವಿಭಾಗಪತ್ರದಲ್ಲಿ ಯಾರು ಯಾರು ರುಜು ಮಾಡಿರುತ್ತಾರೆ ಎಂದರೆ ಶಿವರಾಮಯ್ಯ ಎನ್ನುವ ಸಾಕ್ಷಿದಾರರು ಸಹಿ ಮಾಡಿದ್ದು, ಮತ್ತೊಬ್ಬರು ಸಹಿ ಮಾಡಿದ್ದು , ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಶಿವರಾಮಯ್ಯ ನವರು ಸದರಿ ವಿಭಾಗಪತ್ರದಲ್ಲಿ ಸಹಿ ಮಾಡಿಲ್ಲ ಎಂದರೆ ಸುಳ್ಳು. 1975 ರ ವಿಭಾಗಪತ್ರದಲ್ಲಿ ಯಾರ ಯಾರ ಮಧ್ಯೆ ವಿಭಾಗ ಆಗಿರುತ್ತದೋ ಅವರು ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪನ ನಡುವೆ ವಿಭಾಗವಾಗಿದ್ದು, ಅವರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

1975 ರ ವಿಭಾಗಪತ್ರದಲ್ಲಿ ಜುಂಜಯ್ಯ ನವರು ಸಹಿ ಮಾಡಿರುವುದಿಲ್ಲ ಮತ್ತು ಭಾಗ ಆದಾಗ ಅವರ ಉಪಸ್ಥಿತಿ ಇರಲಿಲ್ಲ ಎಂದರೆ ಸುಳ್ಳು. ನನಗೆ ವಿಭಾಗದ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ, ನನ್ನ ತಂದೆಯವರು ಹೇಳಿದ್ದ ಕಾರಣ ನನಗೆ ಅದರ ಬಗ್ಗೆ ಮಾಹಿತಿ ಇರುತ್ತದೆ. 7 ನೆ ಪ್ರತಿವಾದಿ ಶಿವಮ್ಮ ನವರ ಬಗ್ಗೆ ಭಾಗ ಆಗುವಾಗ ಏನು ನಿಲುವು ತೆಗೆದುಕೊಂಡಿದ್ದರು ಎಂದು ನನ್ನ ತಂದೆಯವರು ನನಗೆ ಹೇಳಿರುತ್ತಾರೆ ಎಂದು ಕೇಳಿದರೆ ಸಾಕ್ಷಿ ಶಿವಮ್ಮ ನವರಿಗೆ ಭಾಗಾಂಶ ಕೊಟ್ಟು ಮದುವೆ ಮಾಡಿ ನಂತರ ಅಣ್ಣ ತಮ್ಮಂದಿರು ಭಾಗಮಾಡಿಕೊಂಡಿರುತ್ತಾರೆ ಎಂದು ನನ್ನ ತಂದೆಯವರು ಹೇಳಿರುತ್ತಾರೆ .

ಶಿವಮ್ಮ ನವರಿಗೆ ಭಾಗ ಕೊಡುವುದನ್ನು ವಿರೋಧ ಮಾಡುವುದಕ್ಕೆ ನಮ್ಮ ತಂದೆಯವರು ಹೇಳಿರುತ್ತಾರಾ ಎಂದು ಕೇಳಿದರೆ ಸಾಕ್ಷಿ ನನ್ನ ತಂದೆಯವರು ಅದರ ಬಗ್ಗೆ ಏನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ರೇವಯ್ಯ ನವರು 1975 ರಲ್ಲಿ ಭಾಗ ಆಗುವಾಗ ಬದುಕಿದ್ದರು ಎಂದರೆ ಸರಿ. ರೇವಯ್ಯ ನವರಿಗೆ ಭಾಗ ಆದಾಗ ಏನಾದರೂ ಆಸ್ತಿಗಳನ್ನು

ಕೊಟ್ಟಿದ್ದರಾ ಎಂದರೆ ಕೊಟ್ಟಿರಬಹುದು, ಆದರೆ ನನಗೆ ಗೊತ್ತಿಲ್ಲ. ರೇವಯ್ಯ ನವರ ಮಕ್ಕಳಾದ ಜುಂಜಯ್ಯ , ರಾಮಲಿಂಗಯ್ಯ ಮತ್ತು ಶಿವಮ್ಮ ನವರ ನಡುವೆ ಯಾವುದೇ ಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರ ನಡುವೆ ಯಾವುದೇ ಭಾಗ ಆಗಿರುವುದಿಲ್ಲ ಎಂದು ಮತ್ತು ರೇವಯ್ಯ ನವರಿಗೆ ಭಾಗ ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆಗಳಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಗೊತ್ತಿಲ್ಲ. ನಾನು ನೀಡಿರುವ ದಾಖಲಾತಿಗಳು ಸೃಷ್ಟಿ ಮಾಡಿರುತ್ತೇನೆ, ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸುಳ್ಳು .

ನನ್ನ ಲಿಖಿತ ಹೇಳಿಕೆಯಲ್ಲಿ ನಾನು ಹೇಳಿರುಂತೆ ಭಾಗ ನೀಡಿರುವ ಬಗ್ಗೆ ನಾನು ಪತ್ರ ನೋಡಿದಾಗ ಗೊತ್ತಾಗಿರುತ್ತದೆ. ನನ್ನ ತಂದೆ 1975 ರಲ್ಲಿ ಭಾಗ ಆದ ವಿಷಯವನ್ನು ಮಾತ್ರ ಹೇಳಿದ್ದು, ಇತ್ತೀಚೆಗೆ ಭಾಗ ಆಗಿರುವ ವಿಚಾರದ ಬಗ್ಗೆ ನನಗೆ ಹೇಳಿರುವುದಿಲ್ಲ. ಇತ್ತೀಚೆಗೆ ಆಗಿರುವ ಭಾಗ 2006 ನೇ ಇಸವಿಯಲ್ಲಿ ಆಗಿರುತ್ತದೆ. ಜುಂಜಯ್ಯ ನವರು ಬೋಗ್ಯ ಪತ್ರದ ಆಧಾರದ ಮೇಲೆ ಕ್ರಯ ಮಾಡಿಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ.

ಜುಂಜಯ್ಯ ನವರು 1975 ಕ್ಕಿಂತ ಮುಂಚಿತವಾಗಿ ಆಗಿರುವ ಬೋಗ್ಯಪತ್ರದ ಆಧಾರದ ಮೇಲೆ ಕ್ರಯ ಮಾಡಿಕೊಟ್ಟಿದ್ದರಾ ಎಂದರೆ ನನಗೆ ಗೊತ್ತಿಲ್ಲ. ಬೋಗ್ಯಪತ್ರವನ್ನು ಮಾಡಿಕೊಡುವಾಗ ಜುಂಜಯ್ಯ ನವರಿಗೆ ಯಾವುದೇ ಪ್ರತ್ಯೇಕ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನರಸಿಂಹಯ್ಯ ನವರಿಗೆ ಜುಂಜಯ್ಯ ನವರು ಈಗಾಗಲೇ ಮಾರಾಟ ಮಾಡಿದ್ದು, ಅದರ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ನಾನು ಕೊಟ್ಟಿಲ್ಲ , ನನ್ನ ಅಣ್ಣ ಕೊಟ್ಟಿರುತ್ತಾರೆ . ಬೋಗ್ಯಪತ್ರವನ್ನು ನಾನು ನೋಡಿರುವುದಿಲ್ಲ. ಬೋಗ್ಯಪತ್ರದಲ್ಲಿ ಮತ್ತು ಸದರಿ ಬೋಗ್ಯಪತ್ರವನ್ನು ಬರೆದುಕೊಟ್ಟ ಜುಂಜಯ್ಯ ನವರಿಗಾಗಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸುಳ್ಳು.

ನನ್ನ ತಂದೆ , ನನ್ನ ಚಿಕ್ಕಪ್ಪ ಮತ್ತು ನಾವೆಲ್ಲರೂ ಸೇರಿ ಪ್ರತಿವಾದಿ 7 ರವರಿಗೆ ಆಸ್ತಿ ಕೊಡಬಾರದೆಂದು ಇಲ್ಲಿ ದಾವೆಯನ್ನು ನಡೆಸುತ್ತಿದ್ದೇವೆ ಎಂದರೆ ಸುಳ್ಳು . ಪ್ರತಿವಾದಿ 1 ರಿಂದ 5 ಮಾಡಿಕೊಂಡಿರುವ ವಿಭಾಗಪತ್ರ ಸರಿ ಇರುವುದಿಲ್ಲ ಎಂದು ನಾನು ಹೇಳಿರುತ್ತೇನೆ ಎಂದರೆ ನಾನು ಆ ರೀತಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ . ಅವರು ಮಾಡಿಕೊಂಡಿರುವ ವಿಭಾಗಪತ್ರದಿಂದ ನನಗೆ ಅನ್ಯಾಯವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಹೇಳಿರುವುದಿಲ್ಲ, ಆದರೆ ಆ ವಿಭಾಗಪತ್ರ ಆದ ನಂತರ ನನಗೆ ಆಸ್ತಿಯಲ್ಲಿ ಭಾಗ ಕೊಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ .

ನನ್ನ ತಂದೆಗೆ ಎಲ್ಲ ವಿಚಾರಗಳು ಗೊತ್ತಿದ್ದರೂ ನನ್ನನ್ನು ಮುಂದೆ ಬಿಟ್ಟು ನನ್ನ ತಂದೆಯವರು ಈ ದಾವೆಯನ್ನು ನನ್ನ ಮುಖಾಂತರ ನಡೆಸುತ್ತಿದ್ದಾರೆ ಎಂದರೆ ಸುಳ್ಳು. ಈ ದಾವೆಯಲ್ಲಿ ಹೇಳಲಾಗಿರುವ 1975 ರ ವಿಭಾಗಪತ್ರ , ಬೋಗ್ಯಪತ್ರ ಮತ್ತು ಇತರೇ ದಾಖಲಾತಿಗಳು ಸೃಷ್ಟಿ ಮಾಡಲಾಗಿರುವ ದಾಖಲಾತಿಗಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**